# ಕರ್ನಾಟಕ ರಾಜ್ಯಪತ್ರ

**ಅಧಿಕೃತವಾಗಿ ಪ್ರಕಟಿಸಲಾದುದು**

**ವಿಶೇಷ ರಾಜ್ಯ ಪತ್ರಿಕೆ**

| | | |
|---|---|---|
| ಭಾಗ – ೩<br>**Part – III** | ಬೆಂಗಳೂರು, ಗುರುವಾರ, ೦೪, ಜೂನ್, ೨೦೨೬ (ಜ್ಯೇಷ್ಠ, ೧೪, ಶಕವರ್ಷ, ೧೯೪೮)<br>BENGALURU, THURSDAY, 04, JUNE, 2026 ( JYAISTHA , 14, SHAKAVARSHA, 1948) | ನಂ. ೪೩೬<br>**No. 436** |


**ಕರ್ನಾಟಕ ಸರ್ಕಾರ**

**ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗ**

**ನಂ.204, 2ನೇ ಮಹಡಿ, 3ನೇ ಗೇಟ್,**
**ಬಹುಮಹಡಿಗಳ ಕಟ್ಟಡ,**
**ಬೆಂಗಳೂರು-560001**

---

**ಸಂಖ್ಯೆ:** ಕಪಂರಾಸೀನಿಆ/82/ಪ್ರಾ.ಗ.ನಿ/2023 **ದಿನಾಂಕ:03-06-2026**

## ಪ್ರಕಟಣೆ

**ಬಾಗಲಕೋಟೆ ಜಿಲ್ಲೆಯ, ರಬಕವಿ ಬನಹಟ್ಟಿ, ಜಮಖಂಡಿ, ಮತ್ತು ಬಾಗಲಕೋಟೆ ತಾಲ್ಲೂಕುಗಳ ತಾಲ್ಲೂಕು ಪಂಚಾಯಿತಿ ಚುನಾಯಿತ ಸದಸ್ಯರ ಸಂಖ್ಯೆ ನಿಗದಿ ಹಾಗೂ ಪ್ರಾದೇಶಿಕ ಚುನಾವಣಾ ಕ್ಷೇತ್ರಗಳ ಸೀಮಾ/ಗಡಿ ನಿರ್ಣಯ ಕುರಿತು.**

ಕಂದಾಯ ಇಲಾಖೆಯು, ಬಾಗಲಕೋಟೆ ಜಿಲ್ಲೆಯ, ರಬಕವಿ ಬನಹಟ್ಟಿ ತಾಲ್ಲೂಕಿನ ಹಿಪ್ಪರಗಿ ಗ್ರಾಮವನ್ನು ಜಮಖಂಡಿ ತಾಲ್ಲೂಕಿಗೆ ಸೇರ್ಪಡೆಗೊಳಿಸಿ, ಅಧಿಸೂಚನೆ ಸಂಖ್ಯೆ:RD 89 LRD 2023, ದಿನಾಂಕ:14.06.2024ರಲ್ಲಿ ಅಧಿಸೂಚನೆ ಹೊರಡಿಸಿರುತ್ತದೆ ಹಾಗೂ ನಗರಾಭಿವೃದ್ಧಿ ಇಲಾಖೆಯ ಅಧಿಸೂಚನೆ ಸಂಖ್ಯೆ:ನಅಇ/187/ಎಂಎಲ್ ಆರ್/2021(e), ದಿನಾಂಕ:02.12.2023 ರಲ್ಲಿ ಶಿರೂರು ಪಟ್ಟಣ ಪಂಚಾಯಿತಿ ವ್ಯಾಪ್ತಿಯಿಂದ ನೀಲಾನಗರ ತಾಂಡಾ/ಗ್ರಾಮವನ್ನು ಬೇರ್ಪಡಿಸಿ ಅಧಿಸೂಚನೆ ಹೊರಡಿಸಿರುತ್ತದೆ. ಈ ಹಿನ್ನೆಲೆಯಲ್ಲಿ **ರಬಕವಿ ಬನಹಟ್ಟಿ, ಜಮಖಂಡಿ ಮತ್ತು ಬಾಗಲಕೋಟೆ ತಾಲ್ಲೂಕುಗಳ** ಜನಸಂಖ್ಯೆಯಲ್ಲಿ ಬದಲಾವಣೆಯಾಗುವುದರಿಂದ, ಸರ್ಕಾರವು, ದಿನಾಂಕ:16.12.2023ರ ಕರ್ನಾಟಕ ರಾಜ್ಯ ಪತ್ರದಲ್ಲಿ ಅಧಿಸೂಚಿಸಿದ್ದ **ಬಾಗಲಕೋಟೆ ಜಿಲ್ಲೆಯ ರಬಕವಿ ಬನಹಟ್ಟಿ, ಜಮಖಂಡಿ ಮತ್ತು ಬಾಗಲಕೋಟೆ** ತಾಲ್ಲೂಕುಗಳ ತಾಲ್ಲೂಕು ಪಂಚಾಯಿತಿ ಚುನಾಯಿತ ಸದಸ್ಯರ ಸಂಖ್ಯೆ ಹಾಗೂ ಪ್ರಾದೇಶಿಕ ಚುನಾವಣಾ ಕ್ಷೇತ್ರಗಳ ಸೀಮಾ/ಗಡಿ ನಿರ್ಣಯವನ್ನು, ಅಧಿಸೂಚನೆ ಸಂಖ್ಯೆ:RDPR 2 ZPS 2026, ದಿನಾಂಕ:12.05.2026ರಲ್ಲಿ ಹಿಂಪಡೆದು ಆದೇಶಿಸಿದೆ. ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗವು **ಬಾಗಲಕೋಟೆ ಜಿಲ್ಲೆಯ ರಬಕವಿ ಬನಹಟ್ಟಿ, ಜಮಖಂಡಿ ಮತ್ತು ಬಾಗಲಕೋಟೆ** ತಾಲ್ಲೂಕುಗಳ ತಾಲ್ಲೂಕು ಪಂಚಾಯಿತಿ ಚುನಾಯಿತ ಸದಸ್ಯರ ಸಂಖ್ಯೆ ಮತ್ತು ಪ್ರಾದೇಶಿಕ ಚುನಾವಣಾ ಕ್ಷೇತ್ರಗಳ ಸೀಮಾ/ಗಡಿಯನ್ನು ನಿಯಮಾನುಸಾರ ರಚಿಸಬೇಕಾಗಿರುತ್ತದೆ.

ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 121, 122 ಮತ್ತು 124 ರನ್ವಯ ಹಾಗೂ 308(ಇ)(ಎಫ್)ರ ಪ್ರಕರಣದಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗವು **ಬಾಗಲಕೋಟೆ ಜಿಲ್ಲೆಯ, ರಬಕವಿ ಬನಹಟ್ಟಿ ಜಮಖಂಡಿ, ಮತ್ತು ಬಾಗಲಕೋಟೆ** ತಾಲ್ಲೂಕುಗಳ ತಾಲ್ಲೂಕು ಪಂಚಾಯತಿ ಚುನಾಯಿತ ಸದಸ್ಯರ ಸಂಖ್ಯೆಯನ್ನು ಕೋಷ್ಟಕ **'ಅ'** ದಲ್ಲಿರುವಂತೆ ನಿಗದಿಪಡಿಸಿದೆ.

**’ಅ’** ಕೋಷ್ಠಕದ **2ನೇ** ಅಂಕಣದಲ್ಲಿರುವ ತಾಲ್ಲೂಕಿನಿಂದ ಆಯ್ಕೆಯಾಗುವ ತಾಲ್ಲೂಕು ಪಂಚಾಯತಿ ಚುನಾಯಿತ ಸದಸ್ಯರ ಸಂಖ್ಯೆಯನ್ನು **3ನೇ** ಅಂಕಣದಲ್ಲಿ ನಿಗದಿಪಡಿಸಿದೆ.

**ಬಾಗಲಕೋಟೆ ಜಿಲ್ಲೆಯ, ರಬಕವಿ ಬನಹಟ್ಟಿ, ಜಮಖಂಡಿ, ಮತ್ತು ಬಾಗಲಕೋಟೆ** ತಾಲ್ಲೂಕುಗಳ ತಾಲ್ಲೂಕು ಪಂಚಾಯತಿ ವ್ಯಾಪ್ತಿಯೊಳಗಿರುವ ಪ್ರದೇಶಗಳನ್ನು ಅನುಕ್ರಮವಾಗಿ **9, 21 ಮತ್ತು 17** ಏಕ ಸದಸ್ಯ ತಾಲ್ಲೂಕು ಪಂಚಾಯಿತಿ ಪ್ರಾದೇಶಿಕ ಚುನಾವಣಾ ಕ್ಷೇತ್ರಗಳನ್ನಾಗಿ ವಿಂಗಡಿಸಿ ಅವುಗಳ ಸೀಮಾ/ಗಡಿಯನ್ನು ಕೋಷ್ಠಕ **’ಆ’** ದಲ್ಲಿರುವಂತೆ ನಿರ್ಣಯಿಸಿದೆ. **’ಆ’** ಕೋಷ್ಟಕದ **2ನೇ** ಅಂಕಣದಲ್ಲಿ ಪ್ರತಿಯೊಂದು ತಾಲ್ಲೂಕು ಪಂಚಾಯತಿಯ ಪ್ರಾದೇಶಿಕ ಚುನಾವಣಾ ಕ್ಷೇತ್ರದ ಸಂಖ್ಯೆ ಹಾಗೂ ಹೆಸರನ್ನು ಮತ್ತು ಕೋಷ್ಠಕದ **3ನೇ** ಅಂಕಣದಲ್ಲಿ ನಮೂದಿಸಿರುವ ಗ್ರಾಮಗಳನ್ನೊಳಗೊಂಡ ಪ್ರದೇಶವನ್ನು ಆ ಪ್ರಾದೇಶಿಕ ಚುನಾವಣಾ ಕ್ಷೇತ್ರದ ವ್ಯಾಪ್ತಿಯೆಂದು ನಿಗದಿಪಡಿಸಿದೆ.

**ಬಾಗಲಕೋಟೆ ಜಿಲ್ಲೆಯ, ರಬಕವಿ ಬನಹಟ್ಟಿ, ಜಮಖಂಡಿ, ಮತ್ತು ಬಾಗಲಕೋಟೆ** ತಾಲ್ಲೂಕುಗಳ ತಾಲ್ಲೂಕು ಪಂಚಾಯತಿ ಚುನಾಯಿತ ಸದಸ್ಯರ ಸಂಖ್ಯೆ ಹಾಗೂ ಪ್ರಾದೇಶಿಕ ಚುನಾವಣಾ ಕ್ಷೇತ್ರಗಳ ವ್ಯಾಪ್ತಿಗೆ ಸಂಬಂಧಿಸಿದಂತೆ ಆಕ್ಷೇಪಣೆಗಳಿದ್ದಲ್ಲಿ, ಪ್ರಕಟಣೆಯ ದಿನಾಂಕದಿಂದ **7** (ಏಳು) ದಿವಸಗಳ ಒಳಗಾಗಿ **ಅಂದರೆ ದಿನಾಂಕ:09-06-2026, ಸಂಜೆ 5.00 ಗಂಟೆಯ ಒಳಗೆ** ಸಲ್ಲಿಸಲು ತಿಳಿಸಿದೆ. ಆಕ್ಷೇಪಣೆಗಳನ್ನು ಆನ್‌ಲೈನ್ ಮೂಲಕ ಹಾಗೂ ಖುದ್ದಾಗಿ/ಅಂಚೆಯ ಮೂಲಕ ಈ ಕೆಳಕಂಡ ವಿಳಾಸಕ್ಕೆ ಸಲ್ಲಿಸತಕ್ಕದ್ದು. ಅಂಚೆಯ ಮೂಲಕ ಸಲ್ಲಿಸಿದಾಗಲೂ, ಆಯೋಗವು ನಮೂದಿಸಿದ ದಿನಾಂಕದೊಳಗೆ ಸಲ್ಲಿಸತಕ್ಕದ್ದು. ನಂತರ ಸ್ವೀಕೃತವಾದ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ ಹಾಗೂ ಅಂಚೆ ಇಲಾಖೆಯ ವಿಳಂಬಕ್ಕೆ ಆಯೋಗವು ಜವಾಬ್ದಾರರಾಗಿರುವುದಿಲ್ಲ ಎಂದು ಈ ಮೂಲಕ ತಿಳಿಸಿದೆ.

**(ಅ) ಆನ್ ಲೈನ್ ಮೂಲಕ:**

**ವೆಬ್ ಸೈಟ್ ವಿಳಾಸ: "https://rdpr.karnataka.gov.in/rdc/public/"** ಸದರಿ ವೆಬ್‌ಸೈಟ್ ನ ಮುಖಪುಟದ ಎಡಭಾಗದಲ್ಲಿರುವ ಸಾರ್ವಜನಿಕ ಸಲಹೆಗಳು ಎಂಬ ಶೀರ್ಷಿಕೆಯನ್ನು CLICK ಮಾಡಿ ತಮ್ಮ ಆಕ್ಷೇಪಣೆಗಳನ್ನು ಆನ್‌ಲೈನ್ ನಲ್ಲಿ ಸಲ್ಲಿಸಬಹುದು.

**(ಆ) ಖುದ್ದಾಗಿ/ಅಂಚೆ ಮೂಲಕ:**

ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗ.
3ನೇ ಗೇಟ್, 2ನೇ ಮಹಡಿ, ಕೊಠಡಿ ಸಂಖ್ಯೆ: 222/A, ಬಹುಮಹಡಿ ಕಟ್ಟಡ,
ಅಂಬೇಡ್ಕರ್ ವೀಧಿ, ಬೆಂಗಳೂರು-560001.

**ಕೋಷ್ಠಕ ’ಅ’**

| ಬಾಗಲಕೋಟೆ ಜಿಲ್ಲೆ | | |
|---|---|---|
| ಕ್ರ. ಸಂ. | ತಾಲ್ಲೂಕು ಪಂಚಾಯತಿಯ ಹೆಸರು | ತಾಲ್ಲೂಕು ಪಂಚಾಯತಿಯ ಸದಸ್ಯರ ಸಂಖ್ಯೆ |
| 1 | 2 | 3 |
| 1 | ರಬಕವಿ ಬನಹಟ್ಟಿ | 9 |
| 2 | ಜಮಖಂಡಿ | 21 |
| 3 | ಬಾಗಲಕೋಟೆ | 17 |
| ಒಟ್ಟು | | 47 |

## ಕೋಷ್ಟಕ 'ಆ'

| | | |
|---|---|---|
| **ಬಾಗಲಕೋಟೆ ಜಿಲ್ಲೆ** | | |
| **ಕ್ರಸಂ** | **ತಾಲ್ಲೂಕು ಪಂಚಾಯತಿ ಪ್ರಾದೇಶಿಕ ಚುನಾವಣಾ ಕ್ಷೇತ್ರದ ಸಂಖ್ಯೆ ಮತ್ತು ಹೆಸರು** | **ತಾಲ್ಲೂಕು ಪಂಚಾಯತಿ ಪ್ರಾದೇಶಿಕ ಚುನಾವಣಾ ಕ್ಷೇತ್ರದ ವ್ಯಾಪ್ತಿಯಲ್ಲಿನ ಗ್ರಾಮಗಳ ಹೆಸರು** |
| **1** | **2** | **3** |
| **ರಬಕವಿ ಬನಹಟ್ಟಿ ತಾಲ್ಲೂಕು ಪಂಚಾಯಿತಿ** | | |
| 1 | 1-ಯಲ್ಲಟ್ಟಿ | ಯಲ್ಲಟ್ಟಿ, ಬಂಡಿಗಣಿ. |
| 2 | 2-ಕುಲಹಳ್ಳಿ | ಕುಲಹಳ್ಳಿ. |
| 3 | 3-ಆಸಂಗಿ | ಆಸಂಗಿ, ಮದನಮಟ್ಟಿ. |
| 4 | 4-ಜಗದಾಳ | ಜಗದಾಳ. |
| 5 | 5-ನಾವಲಗಿ | ನಾವಲಗಿ. |
| 6 | 6-ಚಿಮ್ಮಡ | ಚಿಮ್ಮಡ. |
| 7 | 7-ಕೆಸರಕೋಪ್ಪ | ಕೆಸರಕೊಪ್ಪ, ಬಿಸನಾಳ, ಸಂಗಾನಟ್ಟಿ. |
| 8 | 8-ಸೈದಾಪೂರ | ಸೈದಾಪೂರ, ಮಧಬಾವಿ, ಮಾರಾಪೂರ. |
| 9 | 9-ಡವಳೇಶ್ವರ | ಡವಳೇಶ್ವರ, ನಂದಗಾಂವ. |
| **ಜಮಖಂಡಿ ತಾಲ್ಲೂಕು ಪಂಚಾಯಿತಿ** | | |
| 1 | 1-ಹುನ್ನೂರ | ಹುನ್ನೂರ, ಕಡಪಟ್ಟಿ, ಹಂಚಿನಾಳ. |
| 2 | 2-ಸಿದ್ದಾಪೂರ | ಸಿದ್ದಾಪೂರ, ಮದರಖಂಡಿ, ಕಲಹಳ್ಳಿ. |
| 3 | 3-ಹಿಪ್ಪರಗಿ | ಹಿಪ್ಪರಗಿ. |
| 4 | 4-ಮೈಗೂರ | ಮೈಗೂರ, ಶಿರಗುಪ್ಪಿ. |
| 5 | 5-ಮುತ್ತೂರ | ಮುತ್ತೂರ, ಆಲಬಾಳ, ಕಂಕಣವಾಡಿ, ಕಡಕೋಳ. |
| 6 | 6-ಆಲಗೂರ | ಆಲಗೂರ. |
| 7 | 7-ಕುಂಬಾರಹಳ್ಳ | ಕುಂಬಾರಹಳ್ಳ, ಸನಾಳ. |
| 8 | 8-ಅಡಿಹುಡಿ | ಅಡಿಹುಡಿ, ಜಂಬಗಿ ಬಿ.ಕೆ, ಟಕ್ಕೋಡ, ಟಕ್ಕಳಕಿ. |
| 9 | 9-ಕುಂಚನೂರ | ಕುಂಚನೂರ, ಜಕನೂರ ಚಿನಗುಂಡಿ. |
| 10 | 10-ಲಿಂಗನೂರ | ಲಿಂಗನೂರ, ಗಣಿ, ಬುದ್ನಿ. |
| 11 | 11-ಕೊಣ್ಣೂರ | ಕೊಣ್ಣೂರ. |
| 12 | 12-ಮರೇಗುದ್ದಿ | ಮರೇಗುದ್ದಿ, ಹುಲ್ಯಾಳ, ಹುಣಶಿಕಟ್ಟಿ. |
| 13 | 13-ಸಾವಳಗಿ | ಸಾವಳಗಿ. |
| 14 | 14-ತುಂಗಳ | ತುಂಗಳ. |
| 15 | 15-ಶೂರಪಾಲಿ | ಶೂರಪಾಲಿ, ತುಬಚಿ, ಜಂಬಗಿ ಕೆ.ಡಿ. |
| 16 | 16-ಹಿರೇಪಡಸಲಗಿ | ಹಿರೇಪಡಸಲಗಿ, ನಾಗನೂರ. |
| 17 | 17-ಬಿದರಿ | ಬಿದರಿ, ಜನವಾಡ, ಚಿಕ್ಕಲಕಿ. |
| 18 | 18-ತೊದಲಬಾಗಿ | ತೊದಲಬಾಗಿ. |
| 19 | 19-ಕನ್ನೋಳ್ಳಿ | ಕನ್ನೋಳ್ಳಿ, ಕುರಗೋಡ, ಗದ್ಯಾಳ, ಖಾಜಿಬೀಳಗಿ. |
| 20 | 20-ಗೋಠೆ | ಗೋಠೆ, ಕಲಬೀಳಗಿ. |
| 21 | 21-ಚಿಕ್ಕಪಡಸಲಗಿ | ಚಿಕ್ಕಪಡಸಲಗಿ, ಕವಟಗಿ. |
| **ಬಾಗಲಕೋಟೆ ತಾಲ್ಲೂಕು ಪಂಚಾಯಿತಿ** | | |
| 1 | 01-ಖಜ್ಜಿಡೋಣಿ | ಖಜ್ಜಿಡೋಣಿ, ಅಂಕಲಗಿ, ಉದಗಟ್ಟಿ, ಉದಗಟ್ಟಿ ಪುಕೇ, ಶಾರದಾಳ. |
| 2 | 02-ಕಲಾದಗಿ | ಕಲಾದಗಿ, ಕಲಾದಗಿ ಪುಕೇ. |
| 3 | 03-ಹಿರೇಶೆಲ್ಲಿಕೇರಿ | ಹಿರೇಶೆಲ್ಲಿಕೇರಿ, ಚಿಕ್ಕಶೆಲ್ಲಿಕೇರಿ, ಕಳಸಕೊಪ್ಪ, ಗೋವಿಂದಕೊಪ್ಪ. |
| 4 | 04-ತುಳಸೀಗೇರಿ | ತುಳಸೀಗೇರಿ, ದೇವನಾಳ, ಹಿರೇಸಂಶಿ, ಚಿಕ್ಕಸಂಶಿ, ಸೊಕನಾದಗಿ. |
| 5 | 05-ಆನದಿನ್ನಿ | ಆನದಿನ್ನಿ ಯಡಹಳ್ಳಿ, ಛಬ್ಬಿ, ಛಬ್ಬಿ ಪುಕೇ. |
| 6 | 06-ಗದ್ದನಕೇರಿ | ಗದ್ದನಕೇರಿ, ದುರ್ಗಾನಗರ (ಗದ್ದನಕೇರಿ ಎಲ್ ಟಿ), ಸೀಮಿಕೇರಿ. |

| ಬಾಗಲಕೋಟೆ ಜಿಲ್ಲೆ | | |
|---|---|---|
| **ಕ್ರಸಂ** | **ತಾಲ್ಲೂಕು ಪಂಚಾಯತಿ ಪ್ರಾದೇಶಿಕ ಚುನಾವಣಾ ಕ್ಷೇತ್ರದ ಸಂಖ್ಯೆ ಮತ್ತು ಹೆಸರು** | **ತಾಲ್ಲೂಕು ಪಂಚಾಯತಿ ಪ್ರಾದೇಶಿಕ ಚುನಾವಣಾ ಕ್ಷೇತ್ರದ ವ್ಯಾಪ್ತಿಯಲ್ಲಿನ ಗ್ರಾಮಗಳ ಹೆಸರು** |
| **1** | **2** | **3** |
| 7 | 07-ಮುರನಾಳ | ಮುರನಾಳ, ಬನ್ನಿದಿನ್ನಿ, ವೀರಾಪೂರ, ಕೇಸನೂರ, ಸಿಂದಗಿ (ಪು.ಕೇಂದ್ರು), ನಕ್ಕರಗುಂದಿ (ಪು.ಕೇಂದ್ರು), ಸಾಳಗುಂದಿ (ಪು.ಕೇಂದ್ರು), ಸಿದ್ನಾಳ (ಪು.ಕೇಂದ್ರು), ಕದಾಂಪೂರ, ಯಂಕಂಚಿ, ಯಂಕಂಚಿ ಪುಕೇ, ಅಂಡಮುರನಾಳ, ಸಿದ್ನಾಳ, ಹೊನರಳ್ಳಿ, ಸೊರಕೊಪ್ಪ, ಸಿಂದಗಿ, ಸಾಳಗುಂದಿ, ನಕ್ಕರಗುಂದಿ. |
| 8 | 08-ನೀಲಾನಗರ | ನೀಲಾನಗರ, ನೀರಲಕೇರಿ, ಮುಚಖಂಡಿ, ದುರ್ಗಾದೇವಿನಗರ. |
| 9 | 09-ಬೆನಕಟ್ಟಿ | ಬೆನಕಟ್ಟಿ, ಮನ್ನಿಕಟ್ಟಿ, ಇಂಗಳಗಿ, ಭಗವತಿ. |
| 10 | 10-ಕಿರಸೂರ | ಕಿರಸೂರ, ಮುಗಳೊಳ್ಳಿ, ಹೊನ್ನಾಕಟ್ಟಿ, ಮುಗಳೊಳ್ಳಿ ಪುಕೇ, ಮುಗಳೊಳ್ಳಿ ತಾಂಡಾ-1, ಮುಗಳೊಳ್ಳಿ ತಾಂಡಾ-2, ಸಂಗೊಂದಿ. |
| 11 | 11-ಬೇವಿನಮಟ್ಟಿ | ಶೀಗೀಕೇರಿ, ಶೀಗೀಕೇರಿ ಪುಕೇ, ಬೇವಿನಮಟ್ಟಿ, ಬೇವಿನಮಟ್ಟಿ ಪುಕೇ, ಮಲ್ಲಾಪೂರ. |
| 12 | 12-ಬೇವೂರ | ಬೇವೂರ, ಚೌಡಾಪೂರ, ಹಳ್ಳೂರ, ಬೈರಮಟ್ಟಿ. |
| 13 | 13-ತಿಮ್ಮಾಪೂರ | ತಿಮ್ಮಾಪೂರ, ಬೋಡನಾಯಕದಿನ್ನಿ, ಬಿಲ್ ಕೆರೂರ, ಅಚನೂರ, ಸಂಗಾಪೂರ, ಬಸವನಗರ. |
| 14 | 14-ಶಿರಗುಪ್ಪಿ | ಶಿರಗುಪ್ಪಿ, ಶಿರಗುಪ್ಪಿ ಪುಕೇ, ಬೆಣ್ಣೂರ, ಬೆಣ್ಣೂರ ಪುಕೇ, ತಳಗಿಹಾಳ, ಇಲಾಳ, ಕಡ್ಲಿಮಟ್ಟಿ, ಜಡ್ರಾಮಕುಂಟಿ, ಜಡ್ರಾಮಕುಂಟಿ ಪುಕೇ, ಲವಳೇಶ್ವರ ತಾಂಡಾ, ಮುಡಪಲಜೀವಿ. |
| 15 | 15-ರಾಂಪೂರ | ರಾಂಪೂರ, ರಾಂಪೂರ ಪುಕೇ, ಸೀತಿಮನಿ ಆರ್.ಎಸ್, ಮಾಸ್ತಿಹಾಳ, ಆಲೂರ, ಹಿರೇಗುಳಬಾಳ, ಚಿಕ್ಕಗುಳಬಾಳ, ಮುತ್ತತ್ತಿ, ಹಿರೇಮೂರಮಟ್ಟಿ, ಚಿಕ್ಕಮೂರಮಟ್ಟಿ, ಹಿರೇಹೊದ್ಲೂರ, ಚಿಕ್ಕಹೊದ್ಲೂರ, ಧರ್ಮನಗರ (ಅಲೂರ ತಾಂಡಾ). |
| 16 | 16-ನಾಯನೇಗಲಿ | ನಾಯನೇಗಲಿ, ಮುದುವಿನಕೊಪ್ಪ, ಚಿಟಗಿನಕೊಪ್ಪ, ದೇವಲಾಪೂರ, ಮನಹಳ್ಳಿ, ಹೊಸೂರ, ನಾಗರಾಳ, ನಾಗಸಂಪಗಿ, ಸೀತಿಮನಿ, ಚಿಕ್ಕಸೀತಿಮನಿ. |
| 17 | 17-ಸುತಗುಂಡಾರ | ಸುತಗುಂಡಾರ, ಡೋಮನಾಳ, ಮಂಕಣಿ, ಚಿಕ್ಕಮ್ಯಾಗೇರಿ, ಹಿರೇಮ್ಯಾಗೇರಿ, ಬೊಮ್ಮಣಗಿ, ಹಂಡರಗಲ್ಲ. |

**ವಿಶೇಷ ಸೂಚನೆ:-**

**ಬಾಗಲಕೋಟೆ ಜಿಲ್ಲೆಯ, ರಬಕವಿ ಬನಹಟ್ಟಿ ಜಮಖಂಡಿ, ಮತ್ತು ಬಾಗಲಕೋಟೆ, ತಾಲ್ಲೂಕುಗಳ ತಾಲ್ಲೂಕು ಪಂಚಾಯಿತಿ ಕ್ಷೇತ್ರಗಳ ಚುನಾಯಿತ ಸದಸ್ಯರ ಸಂಖ್ಯೆ ಮತ್ತು ಪ್ರಾದೇಶಿಕ ಚುನಾವಣಾ ಕ್ಷೇತ್ರಗಳ ಸೀಮಾ/ಗಡಿ ನಿರ್ಣಯ ಕುರಿತಂತೆ, ದಿನಾಂಕ:09-06-2026ರ ಒಳಗಾಗಿ ಸಲ್ಲಿಸಲ್ಪಟ್ಟ ಆಕ್ಷೇಪಣೆ/ಅಹವಾಲುಗಳ ಪರಿಶೀಲನಾ**

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



**ಅದಾಲತ್ ಅನ್ನು ದಿನಾಂಕ:11-06-2026 ರಂದು ಬೆಳಿಗ್ಗೆ11:00 ರಿಂದ ಮಧ್ಯಾಹ್ನ 1:30 ರವರೆಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಗೇಟ್-ನಂ-2, 2ನೇ ಮಹಡಿ, ಕೊಠಡಿ ಸಂಖ್ಯೆ:204, ಬಹುಮಹಡಿಗಳ ಕಟ್ಟಡ, ಬೆಂಗಳೂರು-560001 ಇಲ್ಲಿ ನಡೆಸಲಾಗುವುದು. ಆಕ್ಷೇಪಣೆ ಮತು ಅಹವಾಲುಗಳನ್ನು ಸಲ್ಲಿಸಿರುವವರು ಅದಾಲತ್ ನಲ್ಲಿ ಭಾಗವಹಿಸಲು ಇಚ್ಚಿಸಿದಲ್ಲಿ, ಸರ್ಕಾರದಿಂದ ನೀಡಿರುವ ಭಾವಚಿತ್ರವುಳ್ಳ ಗುರುತಿನ ಚೀಟಿಯ ಮೂಲ ಪ್ರತಿಯನ್ನು ತಮ್ಮೊಂದಿಗೆ ಕಡ್ಡಾಯವಾಗಿ ತರತಕ್ಕದ್ದು.**

**(ಕೆ.ಹೆಚ್.ಕೃಷ್ಣಮೂರ್ತಿ)**
ನಿರ್ದೇಶಕರು (ಪಂ. ರಾಜ್) ಮತ್ತು
ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ
ಹಾಗೂ ಸದಸ್ಯ ಕಾರ್ಯದರ್ಶಿ
ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗ

ಮುದ್ರಕರು ಹಾಗೂ ಪ್ರಕಾಶಕರು:– ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು
THAMMAIAH